- ಸಿಂಪರಣೆಯನ್ನು ಗಾಳಿ ಬೀಸುವ ದಿಕ್ಕಿನಿಂದ ಮಾಡಬೇಕು. ಗಾಳಿ ಬೀಸುವ ದಿಕ್ಕಿಗೆ ವಿರುದ್ಧವಾಗಿ ಸಿಂಪರಣೆ ಮಾಡಬಾರದು. ಅಂದರೆ ಕೀಟನಾಶಕವು ಸಿಂಪರಣೆ ಮಾಡುವವರ ಮೇಲೆ ಬೀಳುವುದಿಲ್ಲ. ಸಿಂಪರಣೆ ಮಾಡುವುದನ್ನು ಬೆಳಗಿನ ಅಥವಾ ಸಂಜೆಯ ಸಮಯದಲ್ಲಿ ಮಾಡಬೇಕು. ವೇಗವಾಗಿ ಗಾಳಿ ಬೀಸುತ್ತಿರುವಾಗ ಸಿಂಪರಣೆ ಅಥವಾ ಧೂಳೀಕರಿಸುವದಾಗಲಿ ಮಾಡಬಾರದು.
- ಸಿಂಪರಣೆ ಮಾಡುವ ಯಂತ್ರದಲ್ಲಿ ಯಾವುದೇ ಭಾಗದಲ್ಲಿ ಕೀಟನಾಶಕವು ಸಿಕ್ಕಿಕೊಂಡರೆ ಅದನ್ನು ಬಾಯಿಯಿಂದ ಊದಿ ಸರಿಪಡಿಸಲು ಪ್ರಯತ್ನಿಸಬಾರದು. ಇದಕ್ಕಾಗಿ ಒಂದು ತಂತಿಯನ್ನಾಗಲಿ ಅಥವಾ ಕಡ್ಡಿಯನ್ನಾಗಲಿ ಉಪಯೋಗಿಸಬೇಕು.
- ಬೆಳೆಗಳು ಹೂ ಬಿಡುತ್ತಿರುವಾಗ ಸಾಧ್ಯವಾದಷ್ಟು ಕೀಟನಾಶಕಗಳನ್ನು ಉಪಯೋಗಿಸಬಾರದು. ಅನಿವಾರ್ಯ ಸಂದರ್ಭಗಳಲ್ಲಿ, ಸಾಯಂಕಾಲ ಮಾತ್ರ ಸಿಂಪರಣೆ ಮಾಡಬೇಕು. ಇದರಿಂದ ಪರಾಗಸ್ಪರ್ಶ ಮಾಡುವ ಕೀಟಗಳು ಮತ್ತು ಜೇನುನೊಣಗಳಿಗೆ ಹೆಚ್ಚಿನ ಹಾನಿಯಾಗುವುದಿಲ್ಲ.

ವಿಷದ ಚಿಹ್ನೆ ಮತ್ತು ವಿಷಕಾರತ್ವ



ಅತ್ಯಂತ ವಿಷಕಾರಿ | ಹೆಚ್ಚು ವಿಷಕಾರಿ | ವಿಷಕಾರಿ | ಸ್ವಲ್ಪ ವಿಷಕಾರಿ

ಪ್ರಥಮ ಚಿಕಿತ್ಸೆ : ವಿಷವು ದೇಹವನ್ನು ಪ್ರವೇಶಿಸಿದಾಗ ಹೊಟ್ಟೆನೋವು, ವಾಂತಿ, ಭೇದಿ ಸಾಮಾನ್ಯ ಲಕ್ಷಣಗಳಾಗಿದ್ದು, ಕೂಡಲೇ ವೈದ್ಯಕೀಯಚಿಕಿತ್ಸೆ ಪಡೆಯಬೇಕು. ಪ್ರಥಮ ಚಿಕಿತ್ಸೆಯಾಗಿ ವಿಷಪೂರಿತ ವ್ಯಕ್ತಿಗೆ ವೈದ್ಯರಲ್ಲಿಗೆ ಕರೆದುಕೊಂಡು ಹೋಗುವುದಕ್ಕೆ ಮುಂಚೆ ಈ ಕೆಳಕಂಡಂತೆ ಪ್ರಥಮ ಚಿಕಿತ್ಸೆಯನ್ನು ನೀಡಬೇಕು.

- ವ್ಯಕ್ತಿಯನ್ನು ವಿಷ ಸಿಂಪರಣೆ ಮಾಡಿದ ಸ್ಥಳದಿಂದ, ಸ್ವಚ್ಛ ಗಾಳಿಯಾಡುವ ಸ್ಥಳಕ್ಕೆ ಬೇರ್ಪಡಿಸಿರಿ.
- ರೋಗಿಗೆ ಒಂದು ಅಥವಾ ಎರಡು ಲೋಟ ನೀರನ್ನು ಕುಡಿಸಿ, ಸಾವಕಾಶವಾಗಿ ಕೈಬೆರಳುಗಳನ್ನು ಗಂಟಲಲ್ಲಿ ಹಾಕಿ ವಾಂತಿ ಮಾಡಿಸುವುದು ಉತ್ತಮ. ಉಪ್ಪಿನ ನೀರನ್ನು ಕುಡಿಸಬೇಡಿ.
- ಸಾಬೂನಿನ ನೀರನ್ನು ಬಳಸಿ ಚೆನ್ನಾಗಿ ಕೈ ತೊಳೆಯಿರಿ, ಹಾಗೂ ಚರ್ಮ, ಕಣ್ಣು ಮತ್ತು ತಲೆಗೂದಲನ್ನು ಸ್ವಚ್ಛಗೊಳಿಸಿರಿ.
- ರೋಗಿಯು ನಿದ್ರೆ ಹೋಗದಂತೆ ಎಚ್ಚರವಹಿಸಿ.
- ವೈದ್ಯರ ಹತ್ತಿರ ಕರೆದುಕೊಂಡು ಹೋಗಿ ವಿಷಕ್ಕೆ ತಕ್ಕ ಆಂಟಿಡೋಟನ್ನು ಕೊಡಿಸಿ.

ಲೇಖಕರು : ಡಾ. ಶ್ರೀವಾಣಿ ಜಿ.ಎನ್
ಶ್ರೀ. ಮಲಕಣ್ಣ ಸಿ ಪಾಟೀಲ
ಡಾ. ಜಿ.ಎಸ್. ಯಡಹಳ್ಳಿ

ಪ್ರಕಾಶಕರು : ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ರಾಯಚೂರು.
ವಿನ್ಯಾಸ : ದೇವರಾಜ ನಾಯಕ
ಅಕ್ಷರ ಜೋಡಣೆ : ಕು. ಸುಮಂಗಳಮ್ಮ ಎಂ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ,
ಅಂಚೆ ಪೆಟ್ಟಿಗೆ ಸಂಖ್ಯೆ-329, ರಾಯಚೂರು-584104
ದೂರವಾಣಿ ಸಂಖ್ಯೆ: 0832-220196

ಕೃಷಿ ಸಮಸ್ಯೆಗಳ ಪರಿಹಾರಕ್ಕಾಗಿ ರೈತರ ಉಚಿತ ಸಹಾಯವಾಣಿ : 1800-425-0470

ಪ್ರತಿಗಳು : 1000

UASR/PC/LL-13/2019-20

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ರಾಯಚೂರು



ಸಸ್ಯ ಸಂರಕ್ಷಣೆಯಲ್ಲಿ ಕೀಟನಾಶಕಗಳ ಸುರಕ್ಷಿತ ಬಳಕೆ

ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ, ರಾಯಚೂರು 584 104

ಕೃಷಿ ಸಮಸ್ಯೆಗಳ ಪರಿಹಾರಕ್ಕಾಗಿ ರೈತರ ಉಚಿತ ಸಹಾಯವಾಣಿ : 1800-425-0470


ಸಸ್ಯ ಸಂರಕ್ಷಣೆಯಲ್ಲಿ ಕೀಟನಾಶಕಗಳ ಸುರಕ್ಷಿತ ಬಳಕೆ

ಜಗತ್ತಿನಾದ್ಯಂತ ಸ್ಥಿರ ಹಾಗೂ ಮಿತವ್ಯಯದಲ್ಲಿ ಬೆಳೆ ಉತ್ಪಾದಿಸಲು ಪೀಡೆನಾಶಕಗಳ ಬಳಕೆಯು ಅನಿವಾರ್ಯವಾಗಿದೆ. ಇದು ಸಂಪೂರ್ಣವಾಗಿ ಅಲ್ಲದೇ ಇದ್ದರೂ ಪೀಡೆ ಹತೋಟಿಯ ಅಂಗವಾಗಿದೆ. ಈ ರಾಸಾಯನಿಕಗಳು ರೈತರ, ಕೆಲಸಗಾರರ ಮತ್ತು ಸಾಮಾನ್ಯ ಜನರ ಅಲ್ಲದೆ ನಿಸರ್ಗಕ್ಕೆ ಅತ್ಯಂತ ಮಾರಕವಾಗಿವೆ. ಪೀಡೆನಾಶಕ ಸಿಂಪಡಿಸುವ ವೇಳೆಯಲ್ಲಿ ಸ್ವಲ್ಪ ಅಜಾಗರೂಕತೆ ವಹಿಸಿದರೂ ವಿಷವು ದೇಹವನ್ನು ಪ್ರವೇಶಿಸುವ ಸಾಧ್ಯತೆಯಿದೆ. ವಿಷವು ದೇಹವನ್ನು ಶ್ವಾಸದ ಮೂಲಕ ಆಹಾರದ ಮೂಲಕ ಅಥವಾ ಚರ್ಮದ ಮೂಲಕ ಪ್ರವೇಶಿಸುತ್ತದೆ. ಮನುಷ್ಯನ ದೇಹವು ಅಲ್ಪ ಪ್ರಮಾಣದಲ್ಲಿ ಹೀರಿಕೊಂಡಿರುವ ವಿಷವನ್ನು ವರ್ಜಿಸುವ ಸಾಮರ್ಥ್ಯ ಹೊಂದಿದೆ. ಒಂದು ವೇಳೆ ಹೆಚ್ಚಿನ ಪ್ರಮಾಣದಲ್ಲಿ ವಿಷವು ದೇಹವನ್ನು ಸೇರಿಕೊಂಡಲ್ಲಿ ದೇಹದ ಮುಖ್ಯ ಅಂಗಗಳಾದ ಮೆದುಳು, ಪಿತ್ತ ಜನಕಾಂಗ, ಮೂತ್ರ ಜನಕಾಂಗ, ಕಿಡ್ನಿ ಮುಂತಾದವುಗಳು ಹಾನಿಗೊಳಗಾಗುತ್ತವೆ. ಮನುಷ್ಯನ ಪ್ರಾಣಕ್ಕೂ ಅಪಾಯ ತಪ್ಪಿದ್ದಲ್ಲ. ವಿಷವು ದೇಹವನ್ನು ಸೇರಿಕೊಂಡಲ್ಲಿ ವ್ಯಕ್ತಿಯಲ್ಲಿ ಹಲವು ಲಕ್ಷಣಗಳು ಕಂಡು ಬರುತ್ತವೆ. ಸಾಮಾನ್ಯವಾಗಿ ತಲೆ ಸುತ್ತುವಿಕೆ, ನಿಶಕ್ತಿ ಮತ್ತು ಬಳಲುವಿಕೆ, ವಿಶೇಷವಾಗಿ ಕಣ್ಣುಗಳ ಕೆಂಪಾಗುವಿಕೆ, ಉರಿಯುವಿಕೆ, ನೀರು ಬರುವಿಕೆ, ಅಸ್ಪಷ್ಟ ನೋಟ, ಉಸಿರಾಡಲು ತೊಂದರೆ, ಉಬ್ಬಸ, ಎದೆನೋವು, ಚರ್ಮ ತುರಿಸುವಿಕೆ, ವಿಪರೀತ ಬೆವರುವಿಕೆ, ವಾಂತಿ ಹೊಟ್ಟೆನೋವು, ಮೂರ್ಚೆ ಹೋಗುವುದು ಇತ್ಯಾದಿ.

ಕೀಟನಾಶಕಗಳ ಸುರಕ್ಷಿತ ಬಳಕೆ:

- ಕೀಟನಾಶಕಗಳನ್ನು ಸಿಂಪಡಿಸುವಾಗ ಸುರಕ್ಷತೆ ಕವಚಗಳನ್ನು ಅಂದರೆ ನಮ್ಮ ದೇಹಕ್ಕೆ ಪ್ರವೇಶಿಸದಂತೆ ಸುರಕ್ಷತೆಯ ಉಪಕರಣಗಳಾದ ಕಣ್ಣಿಗೆ ಕನ್ನಡಕ, ತಲೆಗೆ ಟೋಪಿ, ಮೂಗು ಮತ್ತು ಬಾಯಿಗೆ ಮುಸುಕುಗಳನ್ನು (ಮಾಸ್ಕ್), ಕೈಗಳಿಗೆ ಹ್ಯಾಂಡ್‌ಗ್ಲೋಸ್ ಮತ್ತು ಉದ್ದ ತೋಳಿನ ಉಡುಪುಗಳನ್ನು ಧರಿಸಿ ಕೀಟನಾಶಕಗಳನ್ನು ಸಿಂಪಡಿಸಬೇಕು.





- ಕೀಟನಾಶಕಗಳ ಮೇಲೆ ಇರುವ ಕಲರ್ ಬ್ಯಾಂಡ್ ಅಂದರೆ ಕೆಂಪು ಬಣ್ಣ (ಅತ್ಯಂತ ವಿಷಕಾರಿ), ಹಳದಿ ಬಣ್ಣ (ಹೆಚ್ಚು ವಿಷಕಾರಿ), ನೀಲಿ ಬಣ್ಣ (ಮಧ್ಯಮ ವಿಷಕಾರಿ) ಮತ್ತು ಕೊನೆಯದಾಗಿ ಹಸಿರು ಬಣ್ಣ (ಸ್ವಲ್ಪ ವಿಷಕಾರಿ) ಗಳ ಬಗ್ಗೆ ರೈತರಿಗೆ ಮತ್ತು ಕೂಲಿ ಕಾರ್ಮಿಕರಿಗೆ ಇದರ ಬಗ್ಗೆ ಸೂಕ್ತವಾದ ಮಾಹಿತಿ ಇರಬೇಕು.
- ಶಿಫಾರಸ್ಸು ಮಾಡಿದ ಕೀಟನಾಶಕಗಳನ್ನು ಮಾತ್ರ ಉಪಯೋಗಿಸಬೇಕು. ಒಂದಕ್ಕಿಂತ ಹೆಚ್ಚು ಕೀಟನಾಶಕಗಳನ್ನು ಶಿಫಾರಸ್ಸು ಮಾಡಿದ್ದರೆ ಅವುಗಳಲ್ಲಿ ಸ್ವಾಭಾವಿಕ ಶತ್ರುಗಳಿಗೆ ಸುರಕ್ಷಿತವಾಗಿರುವ ಮತ್ತು ಪರಿಸರ ಮಾಲಿನ್ಯವಾಗದಂತಹ ಕೀಟನಾಶಕಗಳನ್ನು ಆಯ್ಕೆಮಾಡಿಕೊಳ್ಳಬೇಕು.
- ಸ್ಪ್ರೇಯರ್ (ಸಿಂಪರಣೆ ಯಂತ್ರ) ಸರಿಯಾಗಿ ಕೆಲಸ ಮಾಡುತ್ತಿದೆಯೇ ಎಂದು ಉಪಯೋಗಕ್ಕೆ ಮುಂಚೆ ಪರೀಕ್ಷಿಸಬೇಕು. ಸೋರುವ ಸ್ಪ್ರೇಯರ್‌ಗಳನ್ನು ಉಪಯೋಗಿಸಬಾರದು.
- ಆರೋಗ್ಯವಂತ ಪ್ರೌಢರು ಮಾತ್ರ ಸಿಂಪರಣೆ ಮಿಶ್ರಣವನ್ನು ತಯಾರಿಸುವುದು ಹಾಗೂ ಸಿಂಪರಣೆ ಕಾರ್ಯವನ್ನು ಮಾಡಬೇಕು. ಶರೀರದ ಮೇಲೆ ಗಾಯಗಳಿರುವವರು, ಮಕ್ಕಳು ಅಥವಾ ಕೀಟನಾಶಕಗಳ ಬಗ್ಗೆ ಏನನ್ನೂ ಅರಿಯದವರು ಇಂತಹ ಕೆಲಸವನ್ನು ಕೈಗೊಳ್ಳಬಾರದು.
- ಬಾಯಿಯಿಂದ ಕೊಳವೆಯೊಳಕ್ಕೆ ಕೀಟನಾಶಕವನ್ನಾಗಲಿ ಅಥವಾ ಅದರ ದ್ರಾವಣವನ್ನಾಗಲಿ ಎಳೆದುಕೊಳ್ಳಬಾರದು. ಅಪ್ಪಟ ಔಷಧವನ್ನು ಅಳೆದು ಸುರಿಯುವಾಗ ಕೈಗೆ ರಬ್ಬರ ಚೀಲ/ಗ್ಲೌಸ್ ಹಾಕಿಕೊಳ್ಳಬೇಕು.
- ಸಿಂಪರಣಾ ಮಿಶ್ರಣ ತಯಾರಿಸುವುದನ್ನು ಯಾವಾಗಲೂ ಮನೆಯ ಹೊರೆಗೆ ಅಥವಾ ಬಯಲು ಪ್ರದೇಶದಲ್ಲಿ ತಯಾರಿಸಬೇಕು.
- ಕೀಟನಾಶಕಗಳ ಡಬ್ಬಿಗಳ ಮುಚ್ಚಳವನ್ನು ಪ್ರತ್ಯೇಕವಾಗಿಟ್ಟ ಚಾಕುವಿನಿಂದ ತೆಗೆಯಬೇಕು. ಈ ಚಾಕುಗಳನ್ನು ಬೇರೆಯಾವುದಕ್ಕೂ ಉಪಯೋಗಿಸಕೂಡದು.
- ಸಿಂಪರಣೆ ಮಿಶ್ರಣವನ್ನು ಬರೀ ಕೈಗಳಿಂದ ತಯಾರಿಸಬಾರದು. ರಬ್ಬರಿನ ಕೈಚೀಲಗಳನ್ನಾಗಲೀ ಅಥವಾ ಒಂದು ಉದ್ದವಾದ ಹಿಡಿಕೆಯನ್ನಾಲಿ ಉಪಯೋಗಿಸಬೇಕು. ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಮಾತ್ರ ಕೀಟನಾಶಕವನ್ನು ತೆಗೆದುಕೊಳ್ಳಬೇಕು. ಇದನ್ನು ಅಳತೆ ಮಾಡಲು ಇದಕ್ಕಾಗಿಯೇ ಇಟ್ಟ ಅಳತೆ ಮಾಪಕವನ್ನು ಉಪಯೋಗಿಸಬೇಕು.
- ಮಿಶ್ರಣ ತಯಾರಿಸುವಾಗ ಕೀಟನಾಶಕವು ಬಟ್ಟೆಯ ಮೇಲಾಗಲಿ ಅಥವಾ ಮೈಮೇಲೆ ಬೀಳದಂತೆ ಎಚ್ಚರ ವಹಿಸಬೇಕು. ಕೀಟನಾಶಕದ ದ್ರಾವಣವನ್ನು ಸ್ಪ್ರೇಯರ್‌ನಲ್ಲಿ ಹಾಕುವಾಗ ಹೊರಗಡೆ ಸಿಡಿಯದಂತೆ ನೋಡಿಕೊಳ್ಳಬೇಕು. ಕೀಟನಾಶಕದ ಪುಡಿಯನ್ನು ಹಾಕುವಾಗ ಹುಡಿಯೇಳದಂತೆ ಹಾಕಬೇಕು.
- ಕೀಟನಾಶಕಗಳ ರುಚಿಯನ್ನಾಗಲಿ ಅಥವಾ ಅವುಗಳ ವಾಸನೆಯನ್ನಾಗಲೀ ನೋಡಬಾರದು. ಒಂದುವೇಳೆ ಮಿಶ್ರಣ ಮಾಡುವಾಗ ತ್ವಚೆಯ ಮೇಲೆ ಅಥವಾ ಕಣ್ಣಿನಲ್ಲಿ ಬಿದ್ದಕೂಡಲೇ ಶುದ್ಧವಾದ ನೀರಿನಲ್ಲಿ ತೊಳೆದುಕೊಳ್ಳಬೇಕು.
- ಮಿಶ್ರಣ ಮಾಡುವ ಸ್ಥಳದಲ್ಲಾಗಲಿ ಅಥವಾ ಸಿಂಪರಣೆ ಮಾಡುವ ಸ್ಥಳದಲ್ಲಾಗಲಿ ಮಕ್ಕಳು, ಸಾಕುಪ್ರಾಣಿಗಳು ಮತ್ತು ಇತರ ಜನರು ಬರದಂತೆ ನೋಡಿಕೊಳ್ಳಬೇಕು.
- ಕೀಟನಾಶಕ ಸಿಂಪರಣೆಯ ಕಾಲಕ್ಕೆ ಧೂಮಪಾನ ಮಾಡುವುದು, ತಿನ್ನುವುದು ಅಥವಾ ಕುಡಿಯುವುದನ್ನು ಮಾಡಬಾರದು.